## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ರಾಜ್ಯ ಚುನಾವಣಾ ಆಯೋಗಕ್ಕೆ 2019-20ನೇ ಸಾಲಿನ ಮೂರನೇ ಕಂತಿನ ಅನುದಾನವನ್ನು ಬಿಡುಗಡೆ ಮಾಡುವ ಬಗ್ಗೆ.

**ಓದಲಾಗಿದೆ:**

1. ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 117 ಜಿಪಸ 2019, ದಿನಾಂಕ:04-05-2019
2. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 117 ಜಿಪಸ 2019, ದಿನಾಂಕ:16-05-2019.
3. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 117 ಜಿಪಸ 2019, ದಿನಾಂಕ:30-08-2019.
4. ಸರ್ಕಾರದ ಸೇರ್ಪಡೆ ಆದೇಶ ಸಂಖ್ಯೆ: ಗ್ರಾಅಪ 117 ಜಿಪಸ 2019, ದಿನಾಂಕ:04-06-2019.
5. ಕಾರ್ಯದರ್ಶಿ, ರಾಜ್ಯ ಚುನಾವಣಾ ಆಯೋಗ, ಬೆಂಗಳೂರು ರವರ ಪತ್ರ ಸಂಖ್ಯೆ:ರಾಚುಆ 04 ಲೆಕ್ಕ 2019-20, ದಿನಾಂಕ:21-11-2019.

**ಪ್ರಸ್ತಾವನೆ:**

ಮೇಲೆ ಓದಲಾದ (1)ರ ಆದೇಶದಲ್ಲಿ ಲೆಕ್ಕ ಶೀರ್ಷಿಕೆ:2515-00-101-0-11-059 ರಡಿ ರೂ.120.00ಲಕ್ಷಗಳಲ್ಲಿ ರೂ.30.00ಲಕ್ಷಗಳನ್ನು ಹಾಗೂ ಮೇಲೆ ಓದಲಾದ (2)ರ ಆದೇಶದಲ್ಲಿ ರೂ.90.00ಲಕ್ಷಗಳನ್ನು ರಾಜ್ಯ ಚುನಾವಣಾ ಆಯೋಗ, ಬೆಂಗಳೂರು ಇವರಿಗೆ ಬಿಡುಗಡೆಗೊಳಿಸಲಾಗಿರುತ್ತದೆ. ಮೇಲೆ ಓದಲಾದ (1), (2) ಹಾಗೂ (3)ರ ಆದೇಶಗಳನ್ವಯ ಲೆಕ್ಕ ಶೀರ್ಷಿಕೆ:2515-00-101-0-17ರ ಒಂದನೇ ಎರಡನೇ ಕಂತಾಗಿ ಬಿಡುಗಡೆ ಮಾಡಿರುವ ವಿವರ ಈ ಕೆಳಕಂಡಂತಿದೆ.

(ರೂ.ಲಕ್ಷಗಳಲ್ಲಿ)

| ಮುಖ್ಯ ಲೆಕ್ಕ ಶೀರ್ಷಿಕೆ:2515-00-101-0-17 | | | | | |
|---|---|---|---|---|---|
| ಉಪ ಲೆಕ್ಕ ಶೀರ್ಷಿಕೆ ಸಂಕೇತ | ವಿವರ | ಆಯವ್ಯಯದಲ್ಲಿ ಒದಗಿಸಿರುವ ಅನುದಾನ | ಒಂದನೇ ಕಂತಾಗಿ ಬಿಡುಗಡೆಗೊಳಿಸಿರುವ ಅನುದಾನ | ಎರಡನೇ ಕಂತಾಗಿ ಬಿಡುಗಡೆಗೊಳಿಸಿರುವ ಅನುದಾನ | ಮೂರನೇ ಕಂತಾಗಿ ಬಿಡುಗಡೆಗೊಳಿಸಬೇಕಾದ ಅನುದಾನ |
| 041 | ಪ್ರಯಾಣ ವೆಚ್ಚಗಳು | 3.00 | 0.75 | 0.75 | 0.75 |
| 051 | ಸಾಮಾನ್ಯ ವೆಚ್ಚಗಳು | 35.00 | 8.75 | 8.75 | 8.75 |
| 071 | ಕಟ್ಟಡ ವೆಚ್ಚಗಳು | 52.00 | 13.00 | 13.00 | 13.00 |
| 195 | ಸಾರಿಗೆ ವೆಚ್ಚಗಳು | 27.00 | 6.75 | 6.75 | 0.00 |
| 021 | ವೈದ್ಯಕೀಯ ವೆಚ್ಚದ ಮರುಪಾವತಿ | 15.00 | 3.75 | 3.75 | 0.00 |
| 034 | ಗುತ್ತಿಗೆ/ ಹೊರಗುತ್ತಿಗೆ | 17.00 | 4.25 | 4.25 | 4.25 |
| ಒಟ್ಟು: | | **149.00** | **37.25** | **37.25** | **26.75** |

ಮೇಲೆ ಓದಲಾದ (1) ಮತ್ತು (2) ರ ಆದೇಶದಲ್ಲಿ 2019-20ನೇ ಸಾಲಿನ ಆಯವ್ಯಯದಲ್ಲಿ ಒದಗಿಸಿರುವ ಅನುದಾನವನ್ನು ರಾಜ್ಯ ಚುನಾವಣಾ ಆಯೋಗಕ್ಕೆ ಲೆಕ್ಕಶೀರ್ಷಿಕೆ:2515-00-101-0-11-059 ರಡಿ ಲಭ್ಯವಿರುವ ರೂ.120.00ಲಕ್ಷಗಳ ಅನುದಾನವನ್ನು ಬಿಡುಗಡೆಗೊಳಿಸಿದೆ.

ಮೇಲೆ ಓದಲಾದ (4)ರ ಸೇರ್ಪಡೆ ಆದೇಶದಲ್ಲಿ ಲೆಕ್ಕ ಶೀರ್ಷಿಕೆ:2515-00-101-0-17-034(ಗುತ್ತಿಗೆ/ ಹೊರಗುತ್ತಿಗೆ)ರಡಿ ಒದಗಿಸಿರುವ ರೂ.17.00ಲಕ್ಷಗಳಲ್ಲಿ ರೂ.4.25ಲಕ್ಷಗಳನ್ನು ಬಿಡುಗಡೆಗೊಳಿಸಿದೆ.

ಮೇಲೆ ಓದಲಾದ (5)ರ ಪ್ರಸ್ತಾವನೆಯಲ್ಲಿ ಲೆಕ್ಕಶೀರ್ಷಿಕೆ:2515-00-101-0-17-041 ರಲ್ಲಿ ರೂ.75.00ಲಕ್ಷಗಳನ್ನು ಲೆಕ್ಕಶೀರ್ಷಿಕೆ:2515-00-101-0-17-034 ರಲ್ಲಿ ರೂ.4.25ಲಕ್ಷಗಳನ್ನು, ಲೆಕ್ಕಶೀರ್ಷಿಕೆ:2515-00-101-0-17-051 ರಲ್ಲಿ

ರೂ.8.75ಲಕ್ಷಗಳನ್ನು, ಲೆಕ್ಕಶೀರ್ಷಿಕೆ:2515-00-101-0-17-071 ರಲ್ಲಿ ರೂ.13.00ಲಕ್ಷಗಳನ್ನು, ಲೆಕ್ಕಶೀರ್ಷಿಕೆ:2515-00-101-0-17-195 ರಡಿ ರೂ.6.75ಲಕ್ಷಗಳನ್ನು ಲೆಕ್ಕಶೀರ್ಷಿಕೆ:2515-00-101-0-17-021ರಡಿ ರೂ.3.75ಲಕ್ಷಗಳನ್ನು ಬಿಡುಗಡೆಗೊಳಿಸಲು ಕೋರಿರುತ್ತಾರೆ.

ರಾಜ್ಯ ಚುನಾವಣಾ ಆಯೋಗ, ಬೆಂಗಳೂರು ಇವರಿಗೆ 2019-20ನೇ ಸಾಲಿನ 3ನೇ ಕಂತಿನ ಅನುದಾನವನ್ನು ಬಿಡುಗಡೆ ಮಾಡಲು ಉದ್ದೇಶಿಸಿದೆ. ಆದುದರಿಂದ, ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 117 ಜಿಪಸ 2019, ಬೆಂಗಳೂರು, ದಿನಾಂಕ:17-02-2020.**

2019-20ನೇ ಸಾಲಿನಲ್ಲಿ ಆರ್ಥಿಕ ಇಲಾಖೆಯು ಆಯವ್ಯಯದಲ್ಲಿ ಒದಗಿಸಿರುವ ಅನುದಾನವನ್ನು ರಾಜ್ಯ ಚುನಾವಣಾ ಆಯೋಗದ ಮುಖ್ಯ ಲೆಕ್ಕ ಶೀರ್ಷಿಕೆಯಾದ 2515-00-101-0-17ಗೆ ಒದಗಿಸಿರುವ ಅನುದಾನದಲ್ಲಿ ಮೂರನೇ ಕಂತಾಗಿ ರೂ.26.75ಲಕ್ಷಗಳನ್ನು ಈ ಕೆಳಕಂಡಂತೆ ಖಜಾನೆ-2ರ ಮೂಲಕ ಅನುದಾನವನ್ನು ಬಿಡುಗಡೆಗೊಳಿಸಿ ಆದೇಶಿಸಿದೆ.

(ರೂ.ಲಕ್ಷಗಳಲ್ಲಿ)

| ಮುಖ್ಯ ಲೆಕ್ಕ ಶೀರ್ಷಿಕೆ:2515-00-101-0-17 | | | |
|---|---|---|---|
| ಉಪ ಲೆಕ್ಕ ಶೀರ್ಷಿಕೆ ಸಂಕೇತ | ವಿವರ | ಆಯವ್ಯಯದಲ್ಲಿ ಒದಗಿಸಿರುವ ಅನುದಾನ | ರಾಜ್ಯ ಚುನಾವಣಾ ಆಯೋಗಕ್ಕೆ ಬಿಡುಗಡೆಯಾಗಬೇಕಾಗಿರುವ ಅನುದಾನ (3ನೇ ಕಂತು) |
| 041 | ಪ್ರಯಾಣ ವೆಚ್ಚಗಳು | 3.00 | 0.75 |
| 051 | ಸಾಮಾನ್ಯ ವೆಚ್ಚಗಳು | 35.00 | 8.75 |
| 071 | ಕಟ್ಟಡ ವೆಚ್ಚಗಳು | 52.00 | 13.00 |
| 034 | ಗುತ್ತಿಗೆ/ಹೊರಗುತ್ತಿಗೆ | 17.00 | 4.25 |
| ಒಟ್ಟು: | | **107.00** | **26.75** |

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ:ಆಇ 01 ಟಿಎಫ್‌ಪಿ 2019, ದಿನಾಂಕ:04-07-2019 ಆಯಾಯ ಇಲಾಖೆಯ ಸರ್ಕಾರದ ಕಾರ್ಯದರ್ಶಿ/ ಪ್ರಧಾನ ಕಾರ್ಯದರ್ಶಿಯವರಿಗೆ ಆರ್ಥಿಕ ಅಧಿಕಾರ ಪ್ರತ್ಯಾಯೋಜನೆಯನ್ವಯ ಹಾಗೂ ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯವರ ಟಿಪ್ಪಣಿ ಸಂಖ್ಯೆ:ಗ್ರಾಅಪ 117 ಜಿಪಸ 2019, ದಿನಾಂಕ:28-01-2020 ರಲ್ಲಿನ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

17/02/2020

(ಸಿ. ಮಂಜೂರ್)
ಸರ್ಕಾರದ ಅಧೀನ ಕಾರ್ಯದರ್ಶಿ(ಜಿ.ಪಂ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

17.02.2020

**ಇವರಿಗೆ:**

ಯೋಜನಾ ನಿರ್ದೇಶಕರು(ಖಜಾನೆ-2), ವಾಣಿಜ್ಯ ತೆರಿಗೆ ಇಲಾಖೆ ಕಟ್ಟಡ, 7ನೇ ಮಹಡಿ, ಗಾಂಧಿನಗರ, ಬೆಂಗಳೂರು.

**ಪ್ರತಿಯನ್ನು:**

1. ಮಹಾಲೇಖಪಾಲರು, ಕರ್ನಾಟಕ ವೃತ್ತ, ಬೆಂಗಳೂರು.

2. ಕಾರ್ಯದರ್ಶಿ, ರಾಜ್ಯ ಚುನಾವಣಾ ಆಯೋಗ, ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಂಡಳಿ ಕಟ್ಟಡ (ಹಿಂಭಾಗ) 1ನೇ ಮಹಡಿ, ನಂ-8, ಕನ್ನಿಂಗ್ ಹ್ಯಾಂ ರಸ್ತೆ, ಬೆಂಗಳೂರು-52.
3. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿ.
4. ಸರ್ಕಾರದ ಕಾರ್ಯದರ್ಶಿ(ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿ.
5. ಉಪಕಾರ್ಯದರ್ಶಿ, ಟಿ.ಎನ್.ಎಂ.ಸಿ, ಖನಿಜ ಭವನ, ಬೆಂಗಳೂರು.
6. ಉಪಕಾರ್ಯದರ್ಶಿ(ಆಡಳಿತ), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಇವರ ಆಪ್ತ ಸಹಾಯಕರು.
7. ಮೇಲ್ವಿಚಾರಕರು, ಗಣಕಕೋಶ, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.
8. ಹೆಚ್ಚುವರಿ ಪ್ರತಿ/ಶಾಖಾ ರಕ್ಷಾ ಕಡತ.